ಪೂರ್ವ ಕಾಲೇಜಿಗೆ ಆರು ಕೊಠಡಿಗಳ ಕಟ್ಟಡ ನಿರ್ಮಾಣಕ್ಕಾಗಿ ಅಪೆಂಡಿಕ್ಸ್–ಇ ಅಡಿ 36.00 ಲಕ್ಷ ರೂಪಾಯಿಗಳನ್ನು ಒದಗಿಸಿಕೊಂಡು ತಾಂತ್ರಿಕ ಅನುಮೋದನೆಯನ್ನು ಮಾರ್ಚ್ 2007ರಲ್ಲಿ ನೀಡಲಾಗಿದೆ.

ಈ ಪೈಕಿ ಇದುವರೆವಿಗೆ ಗುತ್ತಿಗೆದಾರರಿಗೆ 18.32 ಲಕ್ಷ ರೂಪಾಯಿಗಳನ್ನು ಮಾತ್ರ ಗುತ್ತಿಗೆದಾರರಿಗೆ ನೀಡಿರುತ್ತಾರೆ.

ಕಾಮಗಾರಿ ಇನ್ನೂ ಪೂರ್ಣಗೊಂಡಿರುವುದಿಲ್ಲ. ಮೊದಲನೇ ಮಹಡಿ ಛಾವಣಿ ಹಾಕಲಾಗಿದ್ದು, ಉಳಿದ ಕೆಲಸಗಳು ಬಾಕಿ ಇರುತ್ತದೆ. ಕಾಮಗಾರಿಗಳು ಬಾಕಿ ಇರುವುದರಿಂದ ಕಟ್ಟಡವನ್ನು ಉಪಯೋಗಿ ಸಲಾಗುತ್ತಿಲ್ಲ.

ಆ) ಸಾವಳಗಿ ಗ್ರಾಮಕ್ಕೆ ಸರ್ಕಾರಿ ಪದವಿ ಪೂರ್ವ ಕಾಲೇಜು ಮಂಜೂರು ಮಾಡಿರುವುದಿಲ್ಲ.

ಇ) ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡದೇ ಇರುವುದರಿಂದ ಕಟ್ಟಡ ಕಟ್ಟಿದ್ದರೂ ಕಾಲೇಜನ್ನು ಪ್ರಾರಂಭಿಸಿರುವುದಿಲ್ಲ.

617 ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿಗೆ ಪ್ರಾಥಮಿಕ ಶಾಲೆಯಲ್ಲಿ 6ನೇ ಮತ್ತು 7ನೇ ತರಗತಿ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ಮತ್ತು ಶಾಲಾ ಬ್ಯಾಗ್ ಹಂಚಿಕೆಯನ್ನು ಶೈಕ್ಷಣಿಕ ವರ್ಷದ ಯಾವ ತಿಂಗಳಲ್ಲಿ ವಿತರಿಸಬೇಕಿದೆ;

ಆ) ನೋಟ್ ಪುಸ್ತಕ ಹಾಗೂ ಶಾಲಾ ಬ್ಯಾಗ್ ಖರೀದಿಸಲು ಸರ್ಕಾರ ಈವರೆವಿಗೂ ಅನುದಾನ ನೀಡದೇ ಇರುವುದು ಸರ್ಕಾರದ ಗಮನದಲ್ಲಿದೆಯೇ

ಇ) ಶೈಕ್ಷಣಿಕ ವರ್ಷದ ಯಾವ ತಿಂಗಳಲ್ಲಿ ಹಂಚಿಕೆ ಮಾಡುವ ಯೋಜನೆ ಸರ್ಕಾರದ ವಿಚಾರದಲ್ಲಿದೆ?

ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 2009ರ ಜೂನ್ ತಿಂಗಳೊಳಗಾಗಿ ವಿತರಣೆ ಮಾಡಲು ಯೋಜಿಸಲಾಗಿತ್ತು.

ಆ) ಇಲ್ಲ

ಇ) ಮೇಲೆ ತಿಳಿಸಿರುವಂತೆ ಜೂನ್ 2009ರಲ್ಲಿ

753 ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿ 'ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿದೆ;

ಆ) ಇದಕ್ಕೆ ವೆಚ್ಚ ಮಾಡಲಾದ ಹಣವೆಷ್ಟು?

ಇ) ಈ ಪೈಕಿ ಎಷ್ಟು ಪೂರ್ಣಗೊಂಡಿವೆ ಹಾಗೂ ಎಷ್ಟು ಅಪೂರ್ಣವಾಗಿವೆ; ಇಲ್ಲಿಯವರೆವಿಗೂ ಎಷ್ಟು ಪ್ರಗತಿಯಯನ್ನು ಸಾಧಿಸಲಾಗಿದೆ.

ಈ) ಈ ಕ್ಷೇತ್ರದಲ್ಲಿ ಶಾಲಾ ಕೊಠಡಿಗಳ ತೀವ್ರವಾದ ಕೊರತೆ ಇದ್ದು ಮೇಲ್ಕಂಡ ಯೋಜನೆಯಡಿಯಲ್ಲಿ ಎಷ್ಟು ಶಾಲಾ ಕೊಠಡಿಗಳನ್ನು ನಿರ್ಮಿಸಲಾಗುವುದು;

ಉ) ಇದಕ್ಕಾಗಿ ವೆಚ್ಚ ಮಾಡಲಾಗುವ ಹಣವೆಷ್ಟು; (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಊ) ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯ ಅನುಷ್ಠಾನದ ಬಗ್ಗೆ ಸಾರ್ವಜನಿಕರಿಂದ ದೂರುಗಳೇನಾದರೂ ಇವೆಯೇ? ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

ವರ್ಷ	ಕಾಮಗಾರಿ ಹೆಸರು	ನಿರ್ಮಿಸಲಾದ ಕಾಮಗಾರಿ ಸಂಖ್ಯೆ
2006–07	ಹೊಸ ಶಾಲೆ	13
2006–07	ಹೆಚ್ಚುವರಿ ಕೋಣೆ	278
2007–08	ಹೊಸ ಶಾಲೆ	9